# ಒಂದು ದಿನದ ವಿಸ್ಮಯ





ಚಿತ್ರ-ಬರಹ:
**ಕೇಶವ ಕುಡ್ಲ**





**ಮ**ನೆಯ ಕೈತೋಟದಲ್ಲಿ ಹಳೆಯ ಅಡಿಕೆ ಮರವನ್ನು ಬಿಸಾಡದೆ ಅದನ್ನು ಸಣ್ಣ ತುಂಡು ಮಾಡಿ ಕರಗಿ ಗೊಬ್ಬರವಾಗಲೆಂದು ಮಳೆಗಾಲದಲ್ಲಿ ಕೈತೋಟದ ಅಗಲಕ್ಕೂ ಹರಡಿ ಮುಚ್ಚಿಗೆ ಮಾಡಿದ್ದೆವು. ಒಂದು ದಿನ ಸಂಜೆ ಗಿಡಗಳಿಗೆ ಗೊಬ್ಬರ ಹಾಕಲು ಹೋದಾಗ ಕೊಳೆತ ಅಡಿಕೆ ಮರದ ತುಂಡುಗಳಲ್ಲಿ ಒಂದಷ್ಟು ಬಿಳಿಯ ಚುಕ್ಕೆಗಳು ಕಾಣಿಸಿಕೊಂಡವು. ಅದು ಅಣಬೆಯ ಮೊಳಕೆ ಎಂದು ಅರಿವಾಯಿತು. ಅಲ್ಲಲ್ಲಿ ಕೆಲವು ಅಣಬೆ ಗುಂಪುಗಳು ಬೆಳೆದು ಬಾಡಿದ್ದವು.

ಈ ಅಣಬೆ ಒಂದು ದಿನದಲ್ಲಿ ಅದೆಷ್ಟು ವೇಗವಾಗಿ ಬೆಳೆಯುತ್ತದೋ ನೋಡಬೇಕೆನ್ನಿಸಿ ಹೆಚ್ಚು ಚುಕ್ಕಿಗಳು ಮೂಡಿದ್ದ ಒಂದು ಕೊಳೆತ ಅಡಿಕೆ ಮರದ ತುಂಡನ್ನು ತೆಗೆದು ನಮ್ಮ ಮಲಗುವ ಕೋಣೆಯಲ್ಲಿಟ್ಟೆ. ಅಣಬೆ ಬೆಳವಣಿಗೆಗೆ ಅಗತ್ಯವಾದ ತೇವಾಂಶ ಉಳಿಸಲು ಅದಕ್ಕೆ ಸ್ವಲ್ಪ ನೀರು ಸ್ಪ್ರೇ ಮಾಡಿದೆ. ಸುಮಾರು ಎರಡು ಘಂಟೆಗೊಮ್ಮೆ ಎದ್ದು ಅದರ ಬೆಳವಣಿಗೆಯ ವೇಗವನ್ನು ಗಮನಿಸಬೇಕೆಂದು ಮೊಬೈಲಿನಲ್ಲಿ ಅಲಾರಾಂ ಸೆಟ್ ಮಾಡಿ ಮಲಗಿದೆ.

★★★

ಅಣಬೆ ಪ್ರಾಣಿಯೂ ಅಲ್ಲದ ಸಸ್ಯವೂ ಅಲ್ಲದ ಫಂಗಿ ಜಾತಿಯ ಜೀವಿ. ಪ್ರಾಣಿ ಅಥವ ಸಸ್ಯಗಳ ಬೆಳವಣಿಗೆ ಕೋಶ ವಿಭಜನೆಯಿಂದ ನಡೆಯುತ್ತದೆ. ಆದರೆ ಫಂಗಿ ಗುಂಪಿನ ಸದಸ್ಯನಾದ ಅಣಬೆಗೆ ಬೆಳೆಯಲು ಕೋಶ ವಿಭಜನೆಯ ಹಂಗಿಲ್ಲ. ನಮಗೆ ಕಾಣುವುದು ಅದರ ಸ್ಪೋರ್ (ಬೀಜ) ಗಳಿರುವ ಭಾಗ ಮಾತ್ರ. ಅದನ್ನು ಅಣಬೆಯ ಹಣ್ಣು ಎನ್ನಲಡ್ಡಿಯಿಲ್ಲ. ಹಾಗೆ ಮೇಲ್ಭಾಗದಲ್ಲಿ ಕಾಣಿಸಿಕೊಳ್ಳಲು ಸುಮಾರು ದಿನ ಬೇಕಾಗಿರುತ್ತದೆ. ಕೊಳೆತ ವಸ್ತುವಿನ ಒಳಭಾಗದಲ್ಲಿ ಬೆಳವಣಿಗೆಗೆ ಬೇಕಾದ ಸರ್ವಸಿದ್ಧತೆಗಳೂ ಸಾವಕಾಶವಾಗಿ ಆದನಂತರ ವಾತಾವರಣದಲ್ಲಿ ತೇವಾಂಶ, ಉಷ್ಣಾಂಶ ಎಲ್ಲವೂ ಸಮರ್ಪಕ-ವಾಗಿದ್ದಾಗ ಹೊರಗೆ ಕಾಣಿಸಿಕೊಳ್ಳುತ್ತದೆ.

ನಾವು ಮೊದಲಿಗೆ ಗಮನಿಸುವ ಕೆಲ ಮಿಲಿಮೀಟರು ಆಕಾರದ ಮೊಗ್ಗಿನಂತಹ ಆಕಾರದಲ್ಲಿಯೇ ಅದರ ಬೆಳವಣಿಗೆಗೆ ಬೇಕಾದ ಕೋಶಗಳೂ ಸೂಕ್ಷ್ಮವಾಗಿ ಅಡಗಿಕೊಂಡಿರುತ್ತವೆ. ನಂತರ ಅದರ ಹಿಗ್ಗುವಿಕೆ ಮಾತ್ರ ಬಾಕಿ ಇರುತ್ತದೆ. ಪೂರ್ಣ ಬೆಳೆದ ಅಣಬೆಗೆ ಬೇಕಾಗುವ ಎಲ್ಲ ಕೋಶಗಳೂ ಮೊದಲೆ ಸಿದ್ಧವಿರುವುದರಿಂದ ಕೇವಲ ಗಾಳಿ ಮತ್ತು ನೀರಿನ ಹೀರುವಿಕೆಯಿಂದ ಅದು ಬಲೂನು ಉಬ್ಬಿದಂತೆ ಉಬ್ಬಿ ನಾವು ನೋಡುವ ಆಕಾರಕ್ಕೆ ಬರುತ್ತದೆ. ಅದನ್ನು ಸೂಕ್ಷ್ಮದರ್ಶಕದಲ್ಲಿ ನೋಡಿದಾಗ ಬಹಳ ಸಡಿಲಾಗಿ ಹೆಣೆದ ಕೋಶಗಳಿಂದ ಕೂಡಿ ಅದು ಸಂಪೂರ್ಣ ಟೊಳ್ಳಾಗಿರುವುದು ಕಾಣುತ್ತದೆ. ಅದರ ಛತ್ರಿಯಂತಹ ಆಕಾರದ ಅಡಿಯಲ್ಲಿ ಅದರ ಸಂತಾನೋತ್ಪತ್ತಿಗೆ ಕಾರಣವಾಗುವ ಸ್ಪೋರ್‌ಗಳು ಅಡಗಿರುತ್ತವೆ ಮತ್ತು ಪ್ರಸಾರವಾಗುತ್ತವೆ. ಅದರ ಜೀವಿತದ ಉದ್ದೇಶ ಮುಗಿದ ಕಾರಣ ಅಲ್ಪಕಾಲದಲ್ಲೆ ಸಾಯುತ್ತದೆ. ಇದೇ ಅದರ ಒಂದು ದಿನದ ವಿಸ್ಮಯದ ಹಿಂದಿನ ರಹಸ್ಯ.

★★★

ಹೀಗೆ ಬೆಡ್‌ರೂಮಿನಲ್ಲಿ ತಂದಿಟ್ಟುಕೊಂಡ ಅಣಬೆ ಮೊಗ್ಗುಗಳು ಏನಾದುವೆಂದರೆ, ಹನ್ನೊಂದು ಘಂಟೆಯ ವೇಳೆಗೆ ಅರ್ಧದಷ್ಟು ಬೆಳೆದವಲ್ಲದೆ ಪೂರ್ಣ ಆಕಾರಕ್ಕೆ ಅರಳಿಕೊಂಡವು. ಮತ್ತೆರಡು ಘಂಟೆಗಳಲ್ಲಿ ಒಟ್ಟು ಆಕಾರ ದೊಡ್ಡದಾಗಿ ಬೆಳವಣಿಗೆ ನಿಂತಿತು. ಮರುಕ್ಷಣದಲ್ಲೆ ಬಾಡಲು ಆರಂಭವಾಗಿ ಹಂತಹಂತವಾಗಿ ಕುಗ್ಗುತ್ತಾ ಬೆಳಗಿನ ವೇಳೆಗೆ ಬಾಡಿ ಬಸವಳಿದು ಜೋಲುಮೋರೆ ಹಾಕಿ ನಿಂತಿದ್ದವು.